**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 297/2023
ಪಿಡಬ್ಲು :1 ಸಿಡಬ್ಲು :1

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಮಾರುತಿ ತಿಪ್ಪಣ್ಣ ನಾಗರೇಶಿ |
| ತಂದೆಯ ಹೆಸರು | : ಶ್ರೀ ತಿಪ್ಪಣ್ಣ ನಾಗರೇಶಿ |
| ವಯಸ್ಸು | : 38ವರ್ಷ |
| ಉದ್ಯೋಗ | : ಚಾಲಕ- ನಿರ್ವಾಹಕ, 3 ನೇ ವಿಭಾಗ, ಬೆಳಗಾವಿ |
| ವಾಸ್ತವ್ಯ | : ಬೆಳಗಾವಿ |
| ದಿನಾಂಕ | : 20-04-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 4 ರಿಂದ ಚಾಸಾಃ 9 ರವರು ಪರಿಚಯ, ಸದರಿಯವರು ನಮ್ಮ ಕೆ.ಎಸ್.ಆರ್.ಟಿ.ಸಿ ಸಂಘದ ಮುಖಂಡರು ಇರುತ್ತಾರೆ. 1 ನೇ ಆರೋಪಿಯು 3 ನೇ ಘಟಕದ ವ್ಯವಸ್ಥಾಪಕರು ಹಾಗೂ 2 ನೇ ಆರೋಪಿಯು 3 ನೇ ಘಟಕದ ಸಿಬ್ಬಂದಿ ಮೇಲ್ವಿಚಾರಕರು, ವಾ.ಕ.ರ. ಸಂಸ್ಥೆ, ಬೆಳಗಾವಿ. ಆರೋಪಿತರಿಬ್ಬರೂ ಕಳೆದ 2 ವರ್ಷಗಳಿಂದ ನನಗೆ ಪರಿಚಯ ಇರುತ್ತಾರೆ. ನನ್ನ ಜಾತಿ ಹಿಂದೂ ಕೊರಮ ಆಗಿದ್ದು, ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. 1 ಮತ್ತು 2 ನೇ ಆರೋಪಿತರು ಹಿಂದೂ ಲಿಂಗಾಯತರಾಗಿದ್ದು, ಸದರಿಯವರು ನಮಗಿಂತ ಮೇಲಜಾತಿಯವರಾಗಿರುತ್ತಾರೆ. 2022 ನೇ ಇಸವಿಯಲ್ಲಿ ಚಾಸಾಃ 5 ಇವರು ಅವರ ಅಣ್ಣನ ಮಗಳ ಮದುವೆಗೊಸ್ಕರ 10 ದಿನ ರಜೆ ಹಾಕಿದ್ದರು, ವಿಠ್ಠಲ ಕಾಂಬಳೆ ಟ್ರಾಫಿಕ್ ಇನ್ಸಪೆಕ್ಟರ 3ನೇ ಘಟಕ ಇವರು ಚಾಸಾಃ 5 ರವರು 2ದಿನ ಗೈರು ಹಾಜರೆಂದು ಹಾಜರಾತಿ ಪುಸ್ತಕದಲ್ಲಿ ನಮೂದು ಮಾಡಿ 8 ದಿನ ಗಳಿಕೆ ರಜೆ ಎಂದು ಹಾಜರಾತಿ ಪುಸ್ತಕದಲ್ಲಿ ನಮೂದು ಮಾಡಿದ್ದರು. 2 ದಿನ ಗೈರು ಹಾಜರೆಂದು ನಮೂದು ಮಾಡಿದ ಕಾರಣ ಚಾಸಾಃ 5 ರವರ ಸಂಬಳ ಬರಲಿಲ್ಲ, ಆಗ ಚಾಸಾಃ5 ರವರು ವಿಠ್ಠಲ ಕಾಂಬಳೆಯವರಿಗೆ 2 ದಿನ ಗೈರು ಹಾಜರೆಂದು ತೋರಿಸಿದ ಸ್ಥಳದಲ್ಲಿ ಗಳಿಕೆ ರಜೆ ಎಂದು ಪರಿಗಣಿಸಬೇಕೆಂದು ಕೋರಿಕೊಂಡರೂ ಅವರು ಅದನ್ನು ಪರಿಗಣಿಸಲಿಲ್ಲ. ಆದರೆ ಸದರಿಯವರು ಚಾಸಾಃ 5 ರವರಿಗೆ ಹಣದ ಬೇಡಿಕೆ ಇಟ್ಟರು.

2. ಚಾಸಾಃ 5 ರವರಿಗೆ 10 ದಿನ ಗಳಿಕೆ ರಜೆಗಳನ್ನು 1 ನೇ ಆರೋಪಿ 3ನೇ ಘಟಕದ ವ್ಯವಸ್ಥಾಪಕರು ಮಂಜೂರು ಮಾಡಿ ಆದೇಶ ಮಾಡಿದ್ದರು. ಸದರಿ ವಿಷಯವನ್ನು ಚಾಸಾಃ 5 ರವರು ನನಗೆ ತಿಳಿಸಿದರು, ಆ ನಂತರ ನಾನು ವಿಠ್ಠಲ ಕಾಂಬಳೆ ಇವರಿಗೆ ಭೇಟಿ ಆಗಿ ಚಾಸಾಃ5 ರವರ ರಜೆಗಳ ಬಗ್ಗೆ ಬಗೆಹರಿಸಿ ಎಂದು ಕೇಳಿಕೊಂಡೆ, ಆಗ ಅವರು ಚಾಸಾಃ 5 ರವರ ಮುಂದೆ ಹೇಳಿರುತ್ತೇನೆ ಅದರಂತೆ ಮಾಡಿ ಎಂದು ತಿಳಿಸಿದರು, ಆಗ ಆಯಿತು ಎಂದು ಸದರಿಯವರ ಮುಂದೆ ಹೇಳಿದ್ದು, ನಂತರ ಸದರಿ ವಿಷಯವನ್ನು ನಮ್ಮ ಸಂಘದ ಮ್ಯುಖಸ್ಥರಿಗೆ ಮತ್ತು ಸದಸ್ಯರಿಗೆ ಪೋನ ಮುಖಾಂತರ ತಿಳಿಸಿದೆನು. ದಿಃ 11.11.2022 ರಂದು 10.30 ಗಂಟೆ ಸುಮಾರಿಗೆ 3 ನೇ ಘಟಕದ ವ್ಯವಸ್ಥಾಪಕರ ಕೊಠಡಿಗೆ ಬಂದರು. ಆ ದಿನ ಯೂನಿಯನ್ ಸಂಘಟನೆಯ ಪದಾಧಿಕಾರಿಗಳಾದ ಚಾಸಾಃ4, ಚಾಸಾಃ 6 ರಿಂದ ಚಾಸಾಃ 9 ಮತ್ತು ರಾಜು ಪಣ್ಯಾಗೋಳ ಬಂದಿದ್ದರು, ಆ ಸಂದರ್ಭದಲ್ಲಿ ನಾನು ಮತ್ತು ಚಾಸಾಃ 5 ಅಲ್ಲಿದ್ದೇವು.

3. ಆಗ 1 ನೇ ಆರೋಪಿಯು ನಮ್ಮ ಮುಖಂಡರಿಗೆ ಬನ್ನಿ ಎಂದು ಮಾತನಾಡಿಸಿದರು, ಆಗ ಎಲ್ಲರೂ ಘಟಕ ವ್ಯವಸ್ಥಾಪಕರ ಕೊಠಡಿಯಲ್ಲಿ ಕುಳಿತುಕೊಂಡೇವು, ಆ ಸಂದರ್ಭದಲ್ಲಿ 2 ನೇ ಆರೋಪಿಯು ಸಹ ಅಲ್ಲಿ ಹಾಜರಿದ್ದರು, ಆಗ 1 ನೇ ಆರೋಪಿಯು ಇವರು ನಮ್ಮ ಮುಖಂಡರಿಗೆ ಯಾವ ಕಾರಣಕ್ಕೆ ಬಂದಿದ್ದಿರಿ ಎಂದು ವಿಚಾರಿಸಿದಾಗ ಸದರಿಯವರು ಚಾಸಾಃ 5 ಚಪ್ಪರಬಂದ ಇವರ ಸಮಸ್ಯೆ ಇದೆ ಅದರ ಬಗ್ಗೆ ಕೇಳಲು ಬಂದಿರುತ್ತೇವೆ ಎಂದು ಹೇಳಿದರು, ಆಗ ಸದರಿಯವರಿಗೆ 1 ನೇ ಆರೋಪಿಯು ನಿಮ್ಮನ್ನು ಯಾರು ಇಲ್ಲಿಗೆ ಕಳುಹಿಸಿರುತ್ತಾರೆ ಎಂದು ಕೇಳಿದರು, ಆಗ ನಮ್ಮ ಮುಖಂಡರವರು ನಾಗರೇಶಿ ಕರೆಸಿರುತ್ತಾರೆ ಎಂದು ಹೇಳಿದರು, ಆಗ ಅಲ್ಲಿದ್ದಂತಹ ಇಬ್ಬರೂ ಆರೋಪಿತರು ಈ ಹೊಲೆಯನ ಮಾತು ಕೇಳಿ ಇಲ್ಲಿ ಬಂದಿದ್ದೀರಾ ಎಂದು ನನಗೆ ಬೈದಿದ್ದು, ಆಗ ನನಗೆ ಮನಸಿಗೆ ನೋವಾಯಿತು, ಆಗ ಸಂಘದ ಎಲ್ಲಾ ಸದಸ್ಯರು 1 ಮತ್ತು 2 ನೇ ಆರೋಪಿತರು ಅಧಿಕಾರಿಗಳು ಇರುತ್ತಾರೆ ಏನು ಮಾಡಲಾಗುವುದಿಲ್ಲ ಎಂದು ಸಮಾಧಾನ ಹೇಳಿ ನನ್ನನ್ನು ಹೊರಗಡೆ ಕರೆದುಕೊಂಡು ಬಂದರು, ಮಾರನೇ ದಿನ ನಮ್ಮೆಲ್ಲ ಮುಖಂಡರನ್ನು ಡಿಸಿ ಕೊಠಡಿಗೆ ಕರೆಸಿದ್ದರು, ಆಗ ನಾವು 2-3 ತಾಸು ಅವರ ಹತ್ತಿರ ಕೂತುಕೊಂಡು ವಿಠ್ಠಲ ಕಾಂಬಳೆರವರ ಬರುವಿಕೆಗಾಗಿ ಕಾದಿರುತ್ತೇವೆ, ಆದರೆ ಅವರು ಅಲ್ಲಿಗೆ ಬರಲಿಲ್ಲ, ಆಗ ಡಿಸಿ ಅವರು

ವಿಠ್ಠಲ ಕಾಂಬಳೆರವರನ್ನು ನಾನು ಕರೆಸಿ ಮಾತನಾಡುತ್ತೇನೆ ನೀವು ಹೋಗಿ ಎಂದು ಹೇಳಿದರು, ಮಾರನೇ ದಿನ ನಮ್ಮ ಕರ್ತವ್ಯಕ್ಕೆ ಹಾಜರಾದೇವು, ನಾವು ಡಿಸಿ ಆಫೀಸರವನ್ನು ಭೇಟಿ ಆದ ಮಾರನೇ ದಿನ ವಿಠ್ಠಲ ಕಾಂಬಳೆ ಇವರು ಚಾಸಾಃ 5, ಚಾಸಾಃ 6 ಮತ್ತು ಚಾಸಾಃ 9 ರವರ ವಿರುದ್ಧ ಮಾರ್ಕೆಟ್ ಪೋಲೀಸ ಠಾಣೆಯಲ್ಲಿ ದೂರು ನೀಡಿದ್ದರು. ನಾನು ಕರ್ತವ್ಯದಿಂದ ವಾಪಸ್ ಬಂದಾಗ ಚಾಸಾಃ 5, ಚಾಸಾಃ 6 ಮತ್ತು ಚಾಸಾಃ 9 ರವರು ನನ್ನ ಹತ್ತಿರ ಬಂದು ನಿನ್ನ ಮಾತು ಕೇಳಿ ಪ್ರಶ್ನೆ ಮಾಡಿದ್ದರಿಂದ ನಮ್ಮ ಮೇಲೆ ವಿಠ್ಠಲ ಕಾಂಬಳೆರವರು ದೂರು ನೀಡಿರುತ್ತಾರೆ ಎಂದು ಹೇಳಿದರು, ಆಗ ನನಗೆ ಮನಸಿಗೆ ನೋವಾಗಿ ನಾನು ದಿಃ 14.11.2022ರಂದು ಮಾರ್ಕೆಟ್ ಪೋಲೀಸ ಠಾಣೆಯಲ್ಲಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ, ಆಗ ಪೋಲಿಸರು ನನ್ನ ದೂರನ್ನು ಸ್ವೀಕಾರ ಮಾಡಲಿಲ್ಲ, ನಂತರ ನಾನು ಪೋಲಿಸ ಆಯುಕ್ತರು, ಬೆಳಗಾವಿ ಇವರಿಗೆ ಅಂಚೆ ಮುಖಾಂತರ ಹಾಗೂ ಸಿ.ಆರ್.ಇ ಸೆಲ್ಲಿಗೆ ಖುದ್ದಾಗಿ ದೂರನ್ನು ಸಲ್ಲಿಸಿರುತ್ತೇನೆ.

4. ಆಗ ಸಿ.ಆರ್.ಇ ಸೆಲ್ಲಿನವರು ಮಾರ್ಕೆಟ್ ಪಿ.ಐ ರವರಿಗೆ ದೂರನ್ನು ಸ್ವೀಕರಿಸುವಂತೆ ಹೇಳುತ್ತಿದ್ದರು ಆದರೂ ಸಹ ಪಿ.ಐ ರವರು ನಮ್ಮ ದೂರನ್ನು ಸ್ವೀಕಾರ ಮಾಡಿರುವುದಿಲ್ಲ. ಕೊನೆಗೆ ದಿಃ 19.05.2023 ರಂದು ಆರೋಪಿತರ ವಿರುದ್ಧ ಮಾರ್ಕೆಟ್ ಪೋಲಿಸರು ಪ್ರಕರಣವನ್ನು ದಾಖಲು ಮಾಡಿಕೊಂಡರು. ಮಾರ್ಕೆಟ್ ಪಿ.ಐ ರವರು ಸ್ವೀಕರಿಸಿದ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಿಃ 19.05.2023 ರಂದು ಪಿ.ಐ ಮಾರ್ಕೆಟರವರು ಸ್ವೀಕರಿಸಿದ ದೂರನ್ನು ನೋಡಿ ಗುರುತಿಸಿರುತ್ತಾರೆ ಆದ ಕಾರಣ ಸದರಿ ದೂರನ್ನು ನಿಪಿಃ1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ1ಎ ಎಂದು ಗುರುತಿಸಲಾಯಿತು.

5. ಪೋಲಿಸರು ದೂರು ದಾಖಲು ಮಾಡಿಕೊಂಡು ಮಾರನೇ ದಿನ 3 ನೇ ಘಟಕದ ಘಟಕ ವ್ಯವಸ್ಥಾಪಕರ ಕಚೇರಿಗೆ ಬಂದಿದ್ದು, ಆಗ ಪಂಚರಾಗಿ ಚಾಸಾಃ 2 ಮತ್ತು 3 ಹಾಜರಿದ್ದು, ಅವರ ಸಮಕ್ಷಮದಲ್ಲಿ ನಾನು ಘಟನಾ ಸ್ಥಳವನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ

ಪೋಲಿಸರು ನಾನು ಹೇಳಿ ತೋರಿಸಿದಂತೆ ಪಂಚರ ಸಮಕ್ಷಮದಲ್ಲಿ ಪಂಚನಾಮೆ ಮಾಡಿ ಅದಕ್ಕೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆ ಸಂದರ್ಭದಲ್ಲಿ ಪೋಲಿಸರು ಒಂದು ಪೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2ಎ ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ಪೋಟೋವನ್ನು ತೋರಿಸಲಾಗಿ, ಅದರಲ್ಲಿ ತಾನು, ಚಾಸಾಃ 2, ಚಾಸಾಃ 3 ಮತ್ತು ಪೋಲಿಸರು ಹಾಜರಿರುವುದಾಗಿ ನೋಡಿ ಗುರುತಿಸಿದ್ದು, ಆದಕಾರಣ ಸದರಿ ಪೋಟೋವನ್ನು ನಿಪಿಃ 3 ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಹಾಜರಿದ್ದಂತಹ ಪಂಚರ ಸಹಿಯನ್ನು ಪಂಚನಾಮೆಗೆ ತೆಗೆದುಕೊಂಡಿರುತ್ತಾರೆ. ಮತ್ತೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

6. ನಾನು ದೂರು ಕೊಟ್ಟ 15 ದಿನಗಳ ನಂತರ ಮಾರ್ಕೆಟ್ ಪೋಲಿಸರು ನನ್ನನ್ನು 3 ನೇ ಸಿವಿಲ್ ನ್ಯಾಯಾಧೀಶರ ಹತ್ತಿರ ಕರೆದುಕೊಂಡು ಹೋಗಿದ್ದು, ಸದರಿ ನ್ಯಾಯಾಧೀಶರ ಮುಂದೆ ನಾನು ಘಟನೆಯ ಬಗ್ಗೆ ಸವಿಸ್ತಾರವಾಗಿ ಸ್ವಇಚ್ಛೆಯಿಂದ ಹೇಳಿಕೆಯನ್ನು ನೀಡಿರುತ್ತೇನೆ, ಅದನ್ನು ಟೈಪ ಮಾಡಿಕೊಂಡು ನಂತರ ಸದರಿ ಹೇಳಿಕೆಗೆ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿ ಬ್ರೌನ ಪೇಪರನಲ್ಲಿ ಪ್ಯಾಕ ಮಾಡಿದ ಒಂದು ದಾಖಲೆ ಇದ್ದು, ಸದರಿ ಬ್ರೌನ ಪೇಪರ ಪ್ಯಾಕನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯು 3 ನೇ ಸಿವಿಲ್ ನ್ಯಾಯಾದೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೆಳಗಾವಿ ಇವರು ಪಡೆದುಕೊಂಡ ಕಲಂ 164 ರ ಹೇಳಿಕೆಯಾಗಿದ್ದು, ಅದನ್ನು ನಿಪಿಃ 4ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ4ಎ ಎಂದು ಗುರುತಿಸಲಾಯಿತು.

7. ನಾನು ಆಯುಕ್ತರಿಗೆ ಮತ್ತು ಸಿ.ಆರ್.ಇ ಸೆಲ್ಲಿಗೆ ಸಲ್ಲಿಸಿದ ದೂರಿನ ಪ್ರತಿ ನನ್ನ ಹತ್ತಿರ ಇದ್ದು, ಅವುಗಳನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಬಲ್ಲೆ. ಸದರಿ ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ಗುರುತಿಸುವಿಕೆಯ ಸಲುವಾಗಿ **ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.